International Journal of Kannada Research 2022; 8(3): 46-49




International Journal of Kannada Research
www.kannadajournal.com

**ISSN: 2454–5813**
IJKR 2022; 8(3): 46-49
© 2022 IJKR
www.kannadajournal.com
Received: 28-06-2022
Accepted: 30-07-2022

**ಡಾ.ಎಸ್.ಸುಂದರೇಶ**
ಸಹ ಪ್ರಾಧ್ಯಾಪಕರು, ಮುಖ್ಯಸ್ಥರು, ಕನ್ನಡ ಸ್ನಾತಕ ಹಾಗೂ ಸ್ನಾತಕೋತ್ತರ ವಿಭಾಗ, ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು, ಚಿಕ್ಕಮಗಳೂರು, ಕರ್ನಾಟಕ, ಭಾರತ

**Corresponding Author:**
**ಡಾ.ಎಸ್.ಸುಂದರೇಶ**
ಸಹ ಪ್ರಾಧ್ಯಾಪಕರು, ಮುಖ್ಯಸ್ಥರು, ಕನ್ನಡ ಸ್ನಾತಕ ಹಾಗೂ ಸ್ನಾತಕೋತ್ತರ ವಿಭಾಗ, ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು, ಚಿಕ್ಕಮಗಳೂರು, ಕರ್ನಾಟಕ, ಭಾರತ

# ಮಹಿಳೆ ಮತ್ತು ತಲ್ಲಣಗಳು

**ಡಾ.ಎಸ್.ಸುಂದರೇಶ**

**ಪೀಠಿಕೆ**

ಬದಲಾದ ಪರಿಸ್ಥಿತಿಯಲ್ಲಿ ಮಹಿಳೆಯರ ತಲ್ಲಣಗಳನ್ನುಕುರಿತು ಪುರುಷನೊಬ್ಬ ಮಾತನಾಡುವಾಗ ಅತ್ಯಂತ ಸೂಕ್ಷ್ಮವಾಗಿ ವಿವೇಚಿಸಬೇಕು. ಏಕೆಂದರೆ ಆ ಸಮುದಾಯಕ್ಕೆ ಇರಬಹುದಾದ ತಲ್ಲಣಗಳು ಮಹಿಳಾ ಸಂವೇದನೆಯಿಂದ ಬಂದವುಗಳಾಗಿರುವುದಿಲ್ಲ ಅವು ದೂರದಿಂದ ಗಮನಿಸಿದ, ಹೇಳಿದ, ಕೇಳಿದ, ಓದಿದ ವಿಶೇಷವಾದ ವಿಚಾರಗಳನ್ನು ಹಂಚಿಕೊಳ್ಳಬಹುದು. ಮಹಿಳೆಯನ್ನು ಕುರಿತು ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಸಾಹಿತ್ಯಕ, ವೇದ, ವಚನ ಮುಂತಾದ ಹತ್ತು ಹಲವು ಆಯಾಮಗಳಕಡೆ ಗಮನ ನೀಡುವುದು ಬಹಳ ಮುಖ್ಯ ಎನಿಸುತ್ತದೆ.

ಬದಲಾದ ಎನ್ನುವುದು ಏನು? ಬರೀಕಾಲಘಟ್ಟವೇ? ಅಥವಾ ಬದುಕಿನ ಮುಖಗಳೇ ಅಥವಾ ಸಾಂಸ್ಕೃತಿಕವಾದ ಬದುಕು ಪ್ರಾಚೀನ ಕಾಲದಿಂದ ಅರ್ವಾಚೀನ ಕಾಲದವರೆಗೆ ಬದಲಾಗಿದೆಯೆ? ಅಥವಾ ಮಹಿಳೆಯರ ತಲ್ಲಣಗಳಿಗೆ ಕಾರಣಗಳು ಏನು? ಈ ತಲ್ಲಣಗಳ ಹಿಂದೆಧರ್ಮ ಇದೆಯೇ?, ಸಮಾಜ ಇದೆಯೇ? ಪುರುಷ ಇದ್ದಾನೆಯೇ? ಅಥವಾ ಕುಟುಂಬ ವ್ಯವಸ್ಥೆ ಕಾರಣವೇ? ಕಾನೂನುಗಳು ಕಾರಣವೇ?, ಈ ತಲ್ಲಣಗಳ ಹಿಂದೆ ಮಹಿಳೆಯರೂ ಪಾಲುದಾರರೇ? ಇವೆಲ್ಲದರ ನಡುವೆ ಮಾಧ್ಯಮಗಳ ಪಾತ್ರವೇನು ಎಂಬಂತಹ ಗಂಭೀರವಾದ ತರ್ಕ ಮಾಡಬೇಕಾಗಿದೆ. ಹೀಗೆ ಚರ್ಚೆಯನ್ನು ಮುಂದುವರಿಸುವಾಗ ವರ್ಣಾಶ್ರಮ ಪದ್ಧತಿಯೊಳಗಿನ ವ್ಯವಸ್ಥೆಯಲ್ಲಿ ಯಾವ ವರ್ಗದ ಮಹಿಳೆಯರನ್ನು ಕುರಿತು ಚರ್ಚಿಸಬೇಕಾಗಿದೆ.

ಸ್ತ್ರೀಯನ್ನು ಕುರಿತು ವಿಭಿನ್ನವಾದ ಅಭಿಪ್ರಾಯಗಳು ವ್ಯಕ್ತವಾಗಿದೆ. 'ಸ್ತ್ರೀ ಕಿರುಬನ ಹೃದಯದವಳು' ಎಂದು ಋಗ್ವೇದ ಹೇಳಿದರೆ 'ಅವಳು ಎಲ್ಲಕೆಡುಕಿನ ಬೇರು' ಎಂದು ಮಹಾಭಾರತ ಹೇಳುತ್ತದೆ. 'ಅವಳು ಚಂಚಲೆ, ಖಡ್ಗದಂತೆ ಹರಿತವಾದವಳು ಬಿರುಗಾಳಿಯಂತೆ ಅಸ್ಥಿರ' ಎಂದು ರಾಮಾಯಣ ಹೇಳುತ್ತದೆ. 'ಹೆಂಗಸು ಕಾಮ ಪೀಪಾಸೆಯುಳ್ಳವಳು, ಕುಟಿಲೆ, ಸ್ತ್ರೀಸ್ವಾತಂತ್ರ್ಯಕ್ಕೆ ಎಂದಿಗೂ ಅನರ್ಹಳು'ಎಂದು ಮನು ಹೇಳಿದರೆ, 'ಸ್ತ್ರಿ ಒಂದು ವಸ್ತು ಪದಾರ್ಥ' ಎಂದು ಶಾಕ್ತದಲ್ಲಿ ಹೇಳಿದೆ ಹೀಗಾಗಿ ಸ್ತ್ರೀ ಯನ್ನು ಕುರಿತು ಅಗೌರವದಿಂದ ಕೇವಲವಾಗಿ ಮಾತನಾಡಿರುವುದುಕಂಡುಬರುತ್ತದೆ.

'ಸ್ತ್ರೀ' ಎನ್ನುವ ಶಬ್ದವೇ ಸೂತ್ರಿ, ಸೋತೃಗಳ ಧಾತು, ಹೆರುವವಳು ಎನ್ನುವ ಅರ್ಥ ಸ್ತ್ರೀ ವಿರೋಧಿ ಧೋರಣೆಯ ಮನಸ್ಥಿತಿಗಳು ಅರ್ಥೈಸಿವೆ. ಹೀಗಾಗಿ ಯುದ್ಧದಲ್ಲಿ ಸೋತು ಬಂದವರಿಗೆ ಊರನ್ನು ಕಳ್ಳಕಾಕರಿಂದ ರಕ್ಷಿಸುವಲ್ಲಿ ವಿಫಲರಾದ ಗಂಡಸರಿಗೆ ಸೀರೆ ಉಡಿಸಿ ಮೆರವಣಿಗೆ ಮಾಡುತಿದ್ದರು. ಕುಪ್ಪಸ ಬಳೆಯನ್ನು ಉಡುಗೊರೆಯಾಗಿ ಕೊಡುತಿದ್ದರು ಎಂಬ ವಿಚಾರಗಳನ್ನು ಗಮನಿಸಿದರೆ ಕೈಲಾಗದವನು, ರಣಹೇಡಿ, 'ಹೆಂಗಸಿನ ಹಾಗೆ' ಎನ್ನುವ ಮರ್ಯಾದೆಯನ್ನು ಕಳೆಯುವ ಧೋರಣೆ ಇತ್ತು ಎನ್ನುವುದು ಗಮನಿಸಬೇಕಾದುದು. ಪ್ರಾಚೀನ ಭಾರತದಿಂದ ಇಂದಿನ ಕಾಲದವರೆಗೂ ಹೆಣ್ಣಿನ ಸ್ಥಿತಿ ಹೇಳಿಕೊಳ್ಳುವಂತಹ ಪಲ್ಲಟವಾಗಿಲ್ಲದಿರುವುದು ದುರದೃಷ್ಟಕರವಾದ ಸಂಗತಿ. ವೇದಗಳ ಕಾಲದಲ್ಲಿ ಮಹಿಳೆ ಮತ್ತು ಅಸ್ಪೃಶ್ಯರಿಗೆ ಶಿಕ್ಷಣ ಕಲಿಸುವ, ಕಲಿಯುವ ಹಕ್ಕುಗಳು ಇರಲಿಲ್ಲ ಒಂದು ವೇಳೆ ಶಿಕ್ಷಣ ಕಲಿತರೆ ಕಾಯಿಸಿದ ಸೀಸವನ್ನು ನಾಲಿಗೆ ಸೀಳಿ ನಾಲಗೆಗೆ ಹಾಕಲಾಗುತಿತ್ತು ಎಂದು ಹೇಳಲಾಗಿದೆ. ಬುಡಕಟ್ಟು ಸಮುದಾಯಗಳಲ್ಲಿ ಹೆಣ್ಣು ಯಜಮಾನಿ– ಪುರುಷ ಎರಡನೇ ಯಜಮಾನ ಬುಡಕಟ್ಟು ಸಮುದಾಯದಲ್ಲಿ ಹೆರುವುದಷ್ಟೇ ಆಕೆಯ ಜವಾಬ್ದಾರಿ ಲಾಲನೆ, ಪಾಲನೆ ಪುರುಷನದಾಗಿತ್ತು. ಅತ್ತೆದಾರಿಯಲ್ಲಿ ಎದುರಿಗೆ ಬಂದರೆ ಅಳಿಯ ದಾರಿಯಲ್ಲಿ ಅವಿತುಕೊಂಡು ಅತ್ತೆಗೆ ದಾರಿ ಬಿಡಬೇಕಾದ ಸಂದರ್ಭಗಳು ಎದುರಾಗುತಿತ್ತು. ಹೀಗಾಗಿ ಪೂರ್ವಕಾಲದ ಹೆಣ್ಣಿನ ಯಜಮಾನಿಕೆ ವೈದಿಕ ಕಾಲಘಟ್ಟದ ನಂತರ ಪುರುಷ ಕುಟುಂಬದ ಯಜಮಾನಿಕೆಯನ್ನು

ಪಡೆದುಕೊಂಡ ಆದರೆ ದಕ್ಷಿಣಕನ್ನಡ ಜಿಲ್ಲೆ, ಕುಂದಾಪುರ ಮುಂತಾದ ಅನೇಕ ಪ್ರದೇಶಗಳಲ್ಲಿ ಇಂದಿಗೂ 'ಅಳಿಯ ಕಟ್ಟು' ಪದ್ಧತಿ ಇರುವುದು ವಿಶೇಷವಾಗಿ ಗಮನಿಸಬೇಕಾದ ಸಂಗತಿಯಾಗಿದೆ. ಅಳಿಯ ಮದುವೆಯಾಗಿ ತನ್ನ ಮನೆಗೆ ಹೋಗದೆ ಅತ್ತೆಯ ಮನೆಗೆ ಪತ್ನಿಯೊಂದಿಗೆ ಹೋಗುವುದನ್ನು ಗಮನಿಸಬಹುದು. ಭೂಮಿಗೆ ಮೊದಲು ಬೀಜ ಬಿತ್ತಿದವಳು ಮಹಿಳೆ ಎನ್ನುವ ಸತ್ಯವನ್ನು ಸಂಶೋಧಕರು ಹೇಳಿದ್ದಾರೆ. ಇಷ್ಟೆಲ್ಲ ಮಹಿಳೆಯ ಬಗ್ಗೆ ಇರುವ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ತಲ್ಲಣಗಳನ್ನು ವಿವೇಚಿಸಬೇಕಾಗಿದೆ. ವೈದಿಕ ಶಾಹಿ ವ್ಯವಸ್ಥೆಯ ಪಲ್ಲಟಗಳು ಬಹು ಮುಖ್ಯವಾಗಿ ತಲ್ಲಣಗಳಿಗೆ ಕಾರಣವಾಯಿತು ಎನ್ನಬಹುದು. ಸಮಾಜದೊಳಗಿನ ಬಿರುಕು, ಭಿನ್ನ ಮನಸ್ಥಿತಿಗಳಿಗೆ ಕಾರಣವಾಯಿತು ಜನಪದ ಸಾಹಿತ್ಯ ಅದನ್ನೇ ಹೇಳುತ್ತದೆ,

ಅತ್ತೆ ಮಾವರಿಗಂಜಿ, ಸುತ್ತೇಳು ನೆರೆಗಂಜಿ
ಮತ್ತೆತನ್ನ ನಲ್ಲನದನಿಗಂಜಿ..............

ಎಂಬ ಸಾಲುಗಳು ಹೆಣ್ಣು ಇರಬೇಕಾದ ರೀತಿ ನೀತಿಗಳನ್ನು ಹೇಳಿಕೊಡುತ್ತಿದೆ. ಇದು ಲಿಂಗ ತಾರತಮ್ಯವನ್ನು ಹೇಳುತ್ತಾ ಶೋಷಣೆಯ ಮುಖಗಳನ್ನು ಅನಾವರಣ ಮಾಡುತ್ತಿದೆ 'ಪಿತೃ ಪ್ರಧಾನ' ಸಮಾಜ. 'ಯತ್ರನಾರ್ಯಸ್ತು ಪೂಜ್ಯಂತೇರಮಂತೆ ತತ್ರದೇವತಾಃ' ಎಂದು ಹೇಳಿದ ಸಮಾಜದೊಳಗೆ ತಲ್ಲಣಗಳು ಏಕೆ ಎನ್ನುವ ಪ್ರಶ್ನೆ ಕಾಡುತ್ತದೆ. ಜೊತೆಗೆ "ನಸ್ತ್ರೀ ಸ್ವಾತಂತ್ರ್ಯ ಮರ್ಹತೆ" ಎಂಬ ಮಾತುಗಳೇಕೆ ಬಂದವು ಎಂಬುದು ಚರ್ಚಾಸ್ಪದ ವಿಷಯವಾಗಿದೆ. 'ಕೆರೆಗೆ ಹಾರ' ಜನಪದ ಖಂಡಕಾವ್ಯದಲ್ಲಿ ಭಾಗೀರಥಿ ಕೆರೆಗೆ ಆಹಾರವಾಗುತ್ತಾಳೆ ಕಲ್ಲನಕೇರಿ ಮಲ್ಲನಗೌಡನ ಕೆರೆಯಲ್ಲಿ ನೀರಿಲ್ಲದ ಕಾರಣಕ್ಕೆ ಜೋತಿಷಿಯ ಅಣತಿಯಂತೆ ಭಾಗೀರಥಿ ಬಲಿಯಾಗುವುದು ಪುರುಷ ದಾಷ್ಟ್ಯದ ಪ್ರತೀಕವಾಗಿ ಬಂದಿದೆ. ಮಹಿಳೆ ಏಕೆ ಬಲಿಯಾಗಬೇಕು? ಪುರುಷನ ಬಲಿ ಏಕಿಲ್ಲ? ಸ್ತ್ರೀ ಬಲಿಯಿಂದ ನೀರು ಬರುತ್ತದೆ ಎನ್ನುವ ಮೌಢ್ಯ, ಭ್ರಮೆಗಳನ್ನು ಹೆಣೆಯುತ್ತಾ ಪುರುಷ ಪ್ರಭುತ್ವದ ಸಮಾಜವನ್ನು ನಿರ್ಮಿಸಲಾಗಿದೆ. ವೈದಿಕ ಸಂಪ್ರದಾಯದಂತೆ ಪೂಜೆ ನಡೆಯುವುದು, ಮೂಢ ನಂಬಿಕೆಗಳನ್ನು ಸ್ಥಾಪಿಸುವ ಹಿತಾಸಕ್ತಿ ಎದ್ದುಕಾಣುವ ಮುಖಾಂತರ ಶೋಷಣೆಯ ಕ್ರೂರ ವರ್ತನೆ ಎದ್ದು ಕಾಣುತ್ತದೆ. ಹೀಗಾಗಿ ಜನಪದ ಸಾಹಿತ್ಯದ ಆರಂಭದಿಂದಲೂ ಪುರುಷ ನಿರ್ಮಿತ ಮೇಲ್ವರ್ಗದ ಠರಾವುಗಳು ಸ್ತ್ರೀಯನ್ನು ಬಂಧಿಸಿತು.

ಹಾದೀಲಿ ಹೋಗ್ವೋರೆ ಹಾಡೆಂದು ಕಾಡ್ಬೇಡಿ
ಹಾಡಲ್ಲ ನನ್ನ ಒಡಲುರಿದೇವರೆ
ಬೇವರಲ್ಲ ನನ್ನಕಣ್ಣೀರು

ಎಂಬ ಸಾಲುಗಳು ಹೆಣ್ಣಿನ ಅಂತರಂಗದ ಆತ್ಮನಿವೇದನೆಯನ್ನು ಹೇಳುತ್ತಿವೆ. ಹನ್ನೆರಡನೆಯ ಶತಮಾನದಲ್ಲಿ ಭವಿ–ಭಕ್ತ ಎಂದು ನೋಡುತಿದ್ದ ಕಾಲದಲ್ಲೂ ಮಹಿಳಾ ವಚನಕಾರರು ತನ್ನೊಳಗಿನ ನೋವನ್ನು ವ್ಯಕ್ತಪಡಿಸುವುದು ಆ ಕಾಲದ ವಚನಕಾರ್ತಿಯರ ಅಸಹನೆಗೆ ಕಾರಣವಾಗಿದೆ.

1. ಏಕೆನ್ನ ಪುಟಿಸಿದೆಯಯ್ಯಾ ಹೆಣ್ಣುಜನ್ಮದಲ್ಲಿ
ಪುಣ್ಯವಿಲ್ಲದ ಪಾಪಿಯ
ನಾನು ಇಹ ಪರಕ್ಕೆದೂರಳಯ್ಯಾ
ಎನ್ನ ನಾಮ ಹೆಣ್ಣು ನಾಮವಲ್ಲವಯ್ಯಾ[1] – ನೀಲಮ್ಮ

2. ಆರು ಇಲ್ಲದವಳೆಂದು ಅಳಿಗೊಳಲು ಬೇಡ
ಅಳಿಗೊಂಡಡೆ ಆನು ಅಂಜುವಳಲ್ಲ
ಒಲವಿನ ಒತ್ತೆಕಲ್ಲನು ಬೆವರಿಸಬಲ್ಲೆಕಾಣಿರೊ[2] –ಮುಕ್ತಾಯಕ್ಕ

ಎಂಬ ವಚನಗಳನ್ನು ನೋಡಿದರೆ ಪಾಪ– ಪುಣ್ಯದ ಪರಿಕಲ್ಪನೆಯಜೊತೆಗೆ 'ಹೆಣ್ಣು' ಎಂಬುದು ಪುಣ್ಯವಿಲ್ಲದ ಪಾಪಿ ಜೊತೆಗೆ ಇಹ – ಪರಕ್ಕೆ ದೂರವಾದವಳು ಹಾಗಾಗಿ ಹೆಣ್ಣುಜನ್ಮ ಎಂಬುದೇ ನರಕ ಎಂಬ ಯಾತನೆಯ ಆತಂಕದ ವಚನ ದಿಗ್ಧಮೆಯನ್ನು ಸೂಚಿಸುತ್ತದೆ. ಜೊತೆಗೆ ಹೆಣ್ಣು ಅಸಹಾಯಕಳಲ್ಲ ಹೆಣ್ಣು ಎಂದು ನಿಂದಿಸಿದರೆ ನಾಶಮಾಡುವ, ಹಾಳುಮಾಡುವ, ಮಾತನಾಡಿದರೆ ನಾನು ಅಂಜುವುದಿಲ್ಲ ಜಡವಾದ ಕಲ್ಲನ್ನೂ ಕೂಡಾ ಬೆವರಿಸಬಲ್ಲೆ ಎನ್ನುವ ಸವಾಲು ಆಕೆಯದು ಹೀಗಾಗಿ ಒಂದೆಡೆ 'ಹೆಣ್ಣು' ಎಂಬ ಕೀಳರಿಮೆ ಇದ್ದರೆ ಇನ್ನೊಂದೆಡೆ ಸ್ಫೋಟಗುಣದ ಎದೆಗಾರಿಕೆಯ ಗುಣವನ್ನು ಕಾಣಬಹುದು. ಭಾರತದ ಪ್ರಧಾನ ಮಂತ್ರಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು "ನಾನೊಬ್ಬ ಮಹಿಳಾವಾದಿಯಲ್ಲ, ಮಹಿಳೆ ಎಂಬ ಅನುಕಂಪ ನನಗೆ ಬೇಕಿಲ್ಲ ಪುರುಷನಂತೆ ರಾಜಕೀಯ ನಿಭಾಯಿಸುತ್ತೇನೆ" ಎಂಬಂತಹ ಮಾತುಗಳನ್ನು ಗಮನಿಸಬೇಕು. ಯಾವ ಸಮಾಜ ಮಹಿಳೆ ಅಬಲೆ, ಅಸಹಾಯಕಳು ಎಂದಿತ್ತೊ ಅದಕ್ಕೆ ಪ್ರತಿ ಸವಾಲಾಗಿ ಉತ್ತರ ಕೊಡುವ ಮುಖಾಂತರ, ಅನುಕಂಪವನ್ನು ನಿರಾಕರಿಸುವುದು ಮತ್ತು ಪ್ರಭುತ್ವವನ್ನು ಮಹಿಳೆಯರೂ ಸಮರ್ಥವಾಗಿ ನಿರ್ವಹಿಸಬಲ್ಲರು ಎನ್ನುವ ಅವರ ಮನೋಬಲ, ಆತ್ಮಸ್ಥೈರ್ಯ ಮೆಚ್ಚಬೇಕಾದುದುಡಾ. ಅಂಬೇಡ್ಕರ್ ಕೂಡ "ಹೆಣ್ಣಿಗೆ ಶಿಕ್ಷಣ ಮತ್ತು ಮೀಸಲಾತಿ ಕೊಡಬೇಕು" ಎಂಬ ಮಾತನ್ನು ಗಮನಿಸಿದರೆ, ಅವಕಾಶಗಳನ್ನು ಕೊಟ್ಟರೆ ಲಿಂಗತಾರತಮ್ಯವಿಲ್ಲದೆ ಪುರುಷನ ಸರಿಸಮಾನವಾಗಿ ಎಲ್ಲರಂಗವನ್ನು ಪ್ರವೇಶ ಮಾಡಬಲ್ಲಳು ಎಂಬುದು ಅವರ ತಾತ್ವಿಕತೆಯ ಜೊತೆಗೆ ದಲಿತರು ಮತ್ತು ಮಹಿಳೆಯನ್ನು ಶೋಷಕ ಸಮಾಜ ಸಮಾನ ಅಂತರದಲ್ಲಿಟ್ಟಿದೆ ಆ ಎರಡು ಸಮುದಾಯಗಳು ಮುಂಚೂಣಿಯಲ್ಲಿರಬೇಕೆಂದರೆ ಅವಕಾಶಗಳು ಬಹಳ ಮುಖ್ಯ. ಶೋಷಣೆ ಮಾಡುವುದಲ್ಲ ಎಂಬುದು ಬಹಳ ಮುಖ್ಯವಾದ ಮಾತಾಗಿದೆ.

ಗಾಂಧಿ, ಅಂಬೇಡ್ಕರ್, ಲೋಹಿಯಾ, ಬಸವಣ್ಣ, ಅನೇಕ ವಚನಕಾರ್ತಿಯರು, ಸರ್ವಜ್ಞ, ದಾಸರು, ಜ್ಯೋತಿಬಾಪುಲೆ, ಸಾವಿತ್ರಿಬಾಯಿಪುಲೆ (ದಮನಿತ ಸಮುದಾಯಕ್ಕಾಗಿ ಶಾಲೆ ತೆರೆದವರು) ಕಾರ್ಲ್ ಮಾರ್ಕ್ಸ್ ಮುಂತಾದವರ ಸಮಾಜ ಸುಧಾರಣೆಯ ಪ್ರಯತ್ನದ ಹೊರತಾಗಿಯೂ ಮಹಿಳೆಯರ ಸ್ಥಿತಿಗತಿ ಹಾಗೆಯೇ ಮುಂದುವರಿಯಲು ಕಾರಣವೇನೆಂದರೆ ಆಳುವ ವರ್ಗಗಳ ದಬ್ಬಾಳಿಕೆ, ಯಜಮಾನ ಸಂಸ್ಕೃತಿಯ ಪ್ರಭಾವಗಳು ಕಾರಣವಾಗಿದೆ. ಸಂಚಿಹೊನ್ನಮ್ಮ ತನ್ನ ಕಾಲದ ಅಸಮಾನತೆಯ ಸ್ಥಿತಿಯನ್ನು ಕಂಡು ಹೀಗೆ ಹೇಳುತ್ತಾಳೆ.

ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣುಕಾಣದ ಗಾವಿಲರು

ಹೀಗೆ ಪುರುಷದಾಷ್ಟ್ಯದ ಎದುರು ಸ್ತ್ರೀಯ ಧ್ವನಿ ಅಲ್ಲಲ್ಲಿ ಕೇಳಿ ಬರುತ್ತದೆ. ಪುರುಷ ನಿರ್ಮಿಸಿಕೊಂಡ ಚೌಕಟ್ಟನ್ನು ಸ್ತ್ರೀ ಮೀರಬಾರದೆನ್ನುವ ಮೂಲಭೂತವಾದಿ ಮನಸ್ಸು ಈತನದು. ಎಂಬತ್ತರ ದಶಕದಲ್ಲಿ ಬಂಡಾಯ–ದಲಿತ ಚಳುವಳಿ ಹುಟ್ಟಿದ

ಕಾಲ ಈ ಕಾಲಘಟ್ಟಗಳಲ್ಲಿ ಶೋಷಿತ ದಲಿತ ಮಹಿಳೆಯರ ಸಂಕಷ್ಟಗಳನ್ನು ಕವಿಗಳು ವ್ಯಕ್ತ ಪಡಿಸಿದ್ದಾರೆ.

ಕೊಲೆಯ ಹಿಂದಿನ ರಾತ್ರಿ
ಸೂರ್ಯಚಂದ್ರನ ಹಿಡಿದು
ಹಣದ ಪೆಟ್ಟಿಗೆಯಲ್ಲಿಕೂಡಿಟ್ಟರೋ
ಭಾರತದ ಭಾವುಟವಕಿತ್ತು ಬಾಯಿಗೆ ತುರುಕಿ
ಕಿತ್ತುಕೊಂಡರು ಅವಳ ಮಾತುಗಳನ್ನು[3] – ಸಿದ್ದಲಿಂಗಯ್ಯ

ಹೀಗೆ ಶ್ರಮಜೀವಿ ವರ್ಗದ ಮಹಿಳೆಯರ ತಲ್ಲಣಗಳು ಮೇಲ್ಜಾತಿಯ, ಮೇಲ್‌ವರ್ಗದ ಮಹಿಳೆಯರಿಗಿಂತ ಭಿನ್ನವಾದವು. ದೇವದಾಸಿ ಪದ್ಧತಿ, ಬೆತ್ತಲೆ ಸೇವೆ ಮುಂತಾದ ಎಲ್ಲ ಬಗೆಯ ಆಚರಣೆಗಳು ಶೋಷಿತರಿಗೆ ಮೀಸಲು. ಈ ವಿಚಾರವಾಗಿ ಪ್ರತಿಭಟನೆಯ ಗಟ್ಟಿದನಿ ಮಾಡಿದ್ದು ದಲಿತ ಸಂಘರ್ಷ ಸಮಿತಿ ಮಾತ್ರ. ಯಾವುದೇ ಮಹಿಳಾ ಸಂಘಟನೆ, ಸಂಪ್ರದಾಯ, ಸಂಸ್ಕೃತಿಯ ವಾರಸುದಾರರು ಅನೇಕ ವರ್ಷಗಳವರೆಗೂ ಮೌನವಹಿಸಿದ್ದು ದುರದೃಷ್ಟಕರ ಸಂಗತಿ. ಸಂವಿಧಾನದ ಅನುಚ್ಛೇದ 14,15–16 ಮತ್ತು 39,A.D.E ರಲ್ಲಿ ಸಮಾನರು, ರಕ್ಷಣೆ ಎನ್ನುವ ಕುರಿತಾದ ಪ್ರಸ್ತಾಪವಿದೆ. ಆದರೆ ಸಂವಿಧಾನ, ಕಾನೂನು ಇವುಗಳ ಮುನ್ನೆಚ್ಚರಿಕೆ ಇಲ್ಲದ ವ್ಯವಸ್ಥೆ ಶೋಷಣೆಯನ್ನು ನಿರಂತರವಾಗಿ ಮಾಡುತ್ತಾ ಬಂದಿದೆ. ಈ ಬಗೆಯಾದ ಅನೇಕ ತಲ್ಲಣಗಳನ್ನು ಕವಯಿತ್ರಿಯರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ.

1. ಏಕೆ ಅರಳಿದಿರಲ್ಲಿ
   ದಾರಿಗರ ಕಣ್ಣ ಕೆಂಪಿಗೆ
   ಉಡುಗಿ ಉಮ್ಮಳಿಸಿ
   ಮೇಕೆ, ಎಮ್ಮೆ, ಹಸು ಕಾಲಡಿಗೆ
   ಕೊಸರಿ ಕಸವಾಗಿ[4] – ಗಿರಿಜಾ ಎಂ ಶಿರಸಿ
2. ಬಂದರು ಭಿಕ್ಷುಕರಂತೆ
   ತ್ರಿಮೂರ್ತಿಗಳೋ ಚತುರ್ಮುಖ ಬ್ರಹ್ಮರೋ
   ಗಂಡಸರು ಭೂಮಿಗೆ
   ಕೈಯಲ್ಲಿ ಭಿಕ್ಷಾಪಾತ್ರೆ ಬಗಲಲ್ಲಿ ಹರಿತ ಚೂರಿ
   ನೆಲದ ಮೇಲೆ ಋಷಿ ಕುಲ
   ಗಡ್ಡ ಕಮಂಡಲ ದಂಡ ಹಿಡಿದ
   ಹೆಡ್ಡ ಗಂಡಂದಿರ [5] – ಡಾ. ಮಲ್ಲಿಕಾ ಘಂಟಿ

ಹೀಗೆ ಜಾಗತೀಕರಣದಂತಹ ಸಂದರ್ಭದಲ್ಲಿ ಮಹಿಳೆಯರ ಶೋಷಣೆ ಮಾಡುತ್ತಾ ವ್ಯಂಗ್ಯದ ಜೊತೆಗೆ, ಮಾರುಕಟ್ಟೆಯ ಸೃಷ್ಟಿ, ಸಂಸ್ಕೃತಿ ಕುರಿತು ಹೇಳುತ್ತಾ ಹಣೆಬರಹವ ಪುರುಷನೇ ಬರೆಯುತ್ತಾನೆ. ಆಕೆ ಪುರುಷ ಸಮಾಜದಲ್ಲಿ ಗೌಣವಾಗಿದ್ದಾಳೆ ಎಂಬ ಬಂಡಾಯದ ದನಿ ಅವರದು ಹಾಗೆಯೇ ಸಾರಾ ಅವರ ಚಪ್ಪಲಿಗಳು ಕಥೆ, ಲಂಕೇಶ್ ಅವರ ರೊಟ್ಟಿಕಥೆ, ದೇವನೂರರ 'ಒಡಲಾಳ'ದ ಸಾಕವ್ವನ ನಿತ್ಯ ವ್ಯಸನಗಳು, ಶಿವಪ್ರಕಾಶ್‌ರವರ 'ಉರಿಯ ಉಯ್ಯಾಲೆ ನಾಟಕ', ಬಿ.ಟಿ.ಲಲಿತಾ ನಾಯಕ್ ಅವರ ಪದ್ಯಗಳು, ಎಂ.ಕೆ. ಇಂದಿರಾ ಅವರ ತಗ್ಗಿನ ಮನೆ ಸೀತೆ, ತ್ರಿವೇಣಿಯವರ ಕಾದಂಬರಿಗಳು, ವೈದೇಹಿಯವರ ಪದ್ಯಗಳು, ನಿಸ್ಸಾರ್ ಅಹಮದ್ ಅವರ 'ಅಮ್ಮ ಆಚಾರ ಮತ್ತು ನಾನು' ಇತ್ಯಾದಿ ಹೀಗೆ ಕಣ್ಣಿಗೆಕಟ್ಟುವ ಹಾಗೆ ಚಿತ್ರಿಸಿದ್ದಾರೆ. ಇವುಗಳ ಜೊತೆಗೆ ಪ್ರತಿಭಾ ನಂದಕುಮಾರ್‌ಅವರ ಪದ್ಯಗಳು ಹೀಗೆ ಮಹಿಳೆಯರ ತಲ್ಲಣಗಳನ್ನು ದಾಖಲಿಸುತ್ತದೆ.

ನಾಲ್ಕು ವರ್ಷಗಳಲ್ಲಿ ವಿಪರೀತದಪ್ಪವಾಗಿ
ಕೈಗೊಂದು ಕಾಲಿಗೊಂದು ಮಕ್ಕಳಾಗಿ ಏದುಸಿರು
ಬಿಡುತ್ತಾ ತರಕಾರಿ ಕೊಳ್ಳುವಾಗ ಅವನು ಸಿಗುತ್ತಾನೆ
ನಮ್ಮ ಇಂದಿನ ಅವಸ್ಥೆಗೆ ಇವನೇ ಕಾರಣ
ಅಂತ ರೋಷ ತಾಳುತ್ತೇವೆ
ಆದರೆ ಮೇಲೆ ನಗು ನಗುತ್ತಾ 'ಅವನ'
ಹೆಂಡತಿ ಮಕ್ಕಳ ಯೋಗಕ್ಷೇಮ ವಿಚಾರಿಸುತ್ತೇನೆ
ಯಾಕೆಂದರೆ ಅವಳದೂ ಅದೇಕಥೆಯಲವೇ?[6] – ಪ್ರತಿಭಾನಂದಕುಮಾರ್

ಹೀಗೆ ಹದಿಹರೆಯದ ವಯಸ್ಸಿನಲ್ಲಿ ಇರಬಹುದಾದ ಭಿನ್ನಭಿನ್ನ ಸಮಸ್ಯೆಗಳು ಅಂತರಂಗದಲ್ಲಿ ಅವುಗಳೆಲ್ಲದರ ಪುನರ್ ಮನನದೊಂದಿಗೆ ಸಂಕಟದ ಹಾದಿಗಳು ತೆರೆದು ಕೊಳ್ಳುತ್ತವೆ. ಹಾಗೆಯೇ ಸುಕನ್ಯಾ ಮಾರುತಿಯವರ ಪದ್ಯ ಹೀಗಿದೆ.

ನನ್ನ ಕೊಲೆಯಾಗುವ ಮುನ್ನ
ನಾನೇ ಶಿಲೆಯಾಗಿ ಬಿಡಬೇಕು
ಗೌತಮನ ಶಾಪದಿಂದಲೂ ಅಲ್ಲ
ಬಣ್ಣ ಬಣ್ಣದ ಬೃಂದಾವನದಲ್ಲಿ
ಸುತ್ತಿ ಸುಳಿಯುವ ಮನಸ
ಕತ್ತು ಹಿಸುಕುವ ಮುನ್ನ
ನಾನು ಶಿಲೆಯಾಗಬೇಕು[7]

ಎಂದು ಮಹಿಳೆಯರಿಗೆ ಅನೇಕ ಸಮಸ್ಯೆಗಳು, ಸಂಕಟಗಳು ಎದುರಾಗಬಹುದು ಆದರೆ ಅವುಗಳನ್ನು ಎದುರಿಸುವ ಕೌಶಲ್ಯವಿರಬೇಕು ಜೊತೆಗೆ ಅವುಗಳನ್ನು ಅರಗಿಸಿಕೊಳ್ಳುವ ಸಾಮರ್ಥ್ಯ ಬರಬೇಕು, ಆವುಗಳೊಂದಿಗೆ ಎದುರಿಸಬೇಕು ಎಂಬ ಹೆಣ್ಣೊಡಲದನಿ ಬಹಳ ಮಹತ್ತರವಾದ ಸಂದೇಶದಂತಿದೆ.

ಮಹಿಳೆಯರ ತಲ್ಲಣಗಳನ್ನು ಸಾಹಿತ್ಯ ವಿವಿಧ ಮಾದರಿಯಲ್ಲಿ ವ್ಯಕ್ತಪಡಿಸಿದರೆ, ಅದರಾಚೆಗೆ ಇನ್ನೂ ಹಲವು ಬಗೆಯ ತಲ್ಲಣಗಳಿಗೆ ಅನೇಕ ಕಾರಣಗಳಿವೆ ಎಂಬುದು ಈ ಕೆಳಕಂಡಂತೆ ಗಮನಿಸಬಹುದು.

1. ಸಾಮಾಜಿಕ ಸಂದರ್ಭದಲ್ಲಿ ಮಹಿಳೆಯರ ಸಮಸ್ಯೆಯನ್ನು ಮೂಗಿನ ನೇರಕ್ಕೆ ವಿಶ್ಲೇಷಿಸುವುದು.
2. ಆಳವಾಗಿ ಬೇರುಬಿಟ್ಟಿರುವ ಪುರುಷರ ಆಕ್ರಮಣಶೀಲತೆ
3. ಲಿಂಗತಾರತಮ್ಯ
4. ಮಾನವ ಹಕ್ಕುಗಳ ಉಲ್ಲಂಘನೆ
5. ವರ್ಣ, ಜಾತಿ, ವರ್ಗಗಳನ್ನು ಆಧರಿಸಿ ಅಸಮಾನತೆಯ ಸ್ಥರಗಳು ಸೃಷ್ಟಿಯಾಗಿರುವುದು
6. ಸಂವಿಧಾನದ ಕಾನೂನಿಗಳಿಗಿಂತಲೂ ಪಿತೃಪ್ರಧಾನವ್ಯವಸ್ಥೆಯ ನಿಯಮಗಳು ಶಕ್ತಿಯುತವಾಗಿರುವುದು
7. ಕುಟುಂಬ ವ್ಯವಸ್ಥೆಯಲ್ಲಿನ ದೋಷಗಳು
8. ಜಾಗತೀಕರಣದ ನೆಪದಲ್ಲಿ – ಸ್ತ್ರೀಯನ್ನು ವಿಕೃತವಾಗಿ ಗ್ರಹಿಸಿರುವುದು
9. ಮಾಧ್ಯಮಗಳಲ್ಲಿ ವೈಭವೀಕರಣದ ಶೋಷಣೆ–ಜಾಹಿರಾತು ಇತ್ಯಾದಿ ಸಂದರ್ಭಗಳಲ್ಲಿ
10. ಮಾರುಕಟ್ಟೆಯ ವಸ್ತುವನ್ನಾಗಿ ಬಿಂಬಿಸುವುದು, ಅಶ್ಲೀಲತೆ, ಸೌಂದರ್ಯ ಸ್ಪರ್ಧೆ ಇತ್ಯಾದಿ
11. ರಾಜಕೀಯ ಪ್ರಾತಿನಿಧ್ಯದ ಕೊರತೆ
12. ದುಡಿಯುವ ವರ್ಗದ ಮಹಿಳೆಯರ ಅನೇಕ ಸಮಸ್ಯೆಗಳು
13. ಸ್ಥಾನ ಮಾನದ ಪ್ರಶ್ನೆಗಳು ಬಂದಾಗತಾರತಮ್ಯ

14. ಶ್ರೇಷ್ಠ– ಕನಿಷ್ಠ ಎನ್ನುವ ಭಾವನೆಗಳು
15. ಸ್ತ್ರೀಯರು ಆರ್ಥಿಕವಾಗಿ ಪರಾವಲಂಬಿಗಳಾದಾಗ
16. ವೈದಿಕ ಸಂಸ್ಕೃತಿಯ ಮುಂದುವರಿದ ಭಾಗವಾಗಿ ಬಿಕ್ಕಟ್ಟು
17. ನೈತಿಕ ಪೊಲೀಸ್‌ಗಿರಿ
18. ಎಲ್ಲ ಧರ್ಮಗಳಲ್ಲೂ ಸಮಾನತೆ, ನಿರ್ಬಂಧಗಳ ಸಮಸ್ಯೆ ಎದುರಾದಾಗ
19. ಎಲ್ಲ ಬಗೆಯ ತಲ್ಲಣಗಳಿಗೆ ಎಲ್ಲ ಧರ್ಮಗಳು ಕೇಂದ್ರಬಿಂದುವಾಗಿರುವುದು
20. ಭ್ರೂಣಹತ್ಯೆಯಿಂದಾಗುವ ಪರಿಣಾಮಗಳು.

ಹೀಗೆ ಕಾಲಗಳು ಘಟಿಸಿದ ಹಾಗೆ ಭಿನ್ನ ಬಗೆಯ ತಲ್ಲಣಗಳ ಸೃಷ್ಟಿಯನ್ನು ಕಾಣುತ್ತೇವೆ. ಈ ರೀತಿಯಾದ ಸಂಕಷ್ಟಗಳಿಗೆ ಕಾರಣವಾದ ವೇದ, ಆಗಮಶಾಸ್ತ್ರ, ಉಪನಿಷತ್ತುಗಳನ್ನು ಬಿಟ್ಟು ಮಾತನಾಡುತ್ತೇವೆ. ಇಂದಿನ ಪುರುಷದಾಷ್ಟ್ಯದ ಹಿಂದೆ ಇವುಗಳಿವೆ ಎಂಬುದು ಸತ್ಯ. ಈ ಬಗೆಯಾದ ಶೋಷಣೆಗಳನ್ನು ಪರಿಹರಿಸುವ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕಾದ ಮಹತ್ತರ ಜವಾಬ್ದಾರಿ ಪ್ರಗತಿಪರ ಚಿಂತಕರು, ಸಮಾಜ ಮುಖಿ ಸಂಘಟನೆ, ಧರ್ಮ ಮತ್ತು ಸಮಾಜಗಳದ್ದು ಅವುಗಳನ್ನು ಹೀಗೆ ನೋಡಬಹುದು.

1. ಧರ್ಮದೊಳಗಿನ ಭಾವನೆಗಳನ್ನು ತಿಳಿಗೊಳಿಸುವ ಹಾಗೆ ಅರಿವು ಮೂಡಿಸುವುದು.
2. ಮಹಿಳೆಯರ ಅಭಿವೃದ್ದಿಯಲ್ಲಿ ಸಂಘಸಂಸ್ಥೆಗಳ ಪಾತ್ರ ತಿಳಿಗೊಳಿಸುವಿಕೆ.
3. ಹಾಲಿ ಜಾರಿಯಲ್ಲಿರುವ ಕಾನೂನುಗಳ ಅಧ್ಯಯನ ಮತ್ತು ಹೊಸ ಕಾನೂನುಗಳ ರಚನೆ ಮಹಿಳೆಯರ ಹಿತರಕ್ಷಣೆಗೆ ವಿಶೇಷ ಅಧ್ಯಯನ ತಂಡ ರಚಿಸುವುದು.
4. ಕಾನೂನಿನ ಮುಂದೆಎಲ್ಲರೂ ಸಮಾನರು ಎಂದು ಬಿಂಬಿಸುವುದು.
5. ಎಲ್ಲ ರಾಜ್ಯಗಳ ಸ್ಥಿತಿಗತಿ ಪರಿಶೀಲಿಸಿ ಸುಧಾರಣೆ – ಸಲಹೆ ನೀಡುವುದು.
6. ಪೋಲಿಸ್ ಇಲಾಖೆ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಸಂಬಂಧಪಟ್ಟ ಇತರ ಇಲಾಖೆಗಳು ಗಮನಹರಿಸುವುದು.
7. ಸರ್ಕಾರೇತರ ಸಂಸ್ಥೆಗಳನ್ನು ಕ್ರಿಯಾಶೀಲಗೊಳಿಸುವುದು.
8. ಗರ್ಭಪಾತ, ಅತ್ಯಾಚಾರ, ವರದಕ್ಷಿಣೆ, ಇತರ ದೌರ್ಜನ್ಯತಡೆಗೆ ವಿಶೇಷ ನಿಯಮಗಳನ್ನು ಜಾರಿಗೊಳಿಸುವುದು.
9. ಕಡ್ಡಾಯ ಶಿಕ್ಷಣ ಜಾರಿಗೊಳಿಸುವುದು.
10. ದುಡಿಯುವ ಮಹಿಳೆಯರಿಗೆ ವಿಮೆ ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟಂತೆ ಸೌಲಭ್ಯಗಳನ್ನು ಒದಗಿಸುವುದು.
11. ಜಾಹೀರಾತು, ಸಿನಿಮಾ, ಅಂತರ್ ಜಾಲಗಳಿಗೆ ನಿಬಂಧನೆಗಳನ್ನು ಹೇರುವುದು.
12. ಹೆಣ್ಣು ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗದಂತೆ ಕ್ರಮಗೊಳ್ಳುವುದು.
13. ಆರ್ಥಿಕವಾಗಿ ಸದೃಢರಾಗುವಂತೆ ಕ್ರಿಯಾಯೋಜನೆ ರೂಪಿಸುವುದು.
14. ಮಹಿಳಾ ಸಬಲೀಕರಣಕ್ಕೆ ವಿಶೇಷವಾದ ಆಸಕ್ತಿ ವಹಿಸುವುದು.
15. ವಿಶೇಷವಾದ ಸೌಲಭ್ಯಗಳನ್ನು ಕಲ್ಪಿಸುವುದು

ಹೀಗೆ ಮಹಿಳೆಯರ ತಲ್ಲಣಗಳಿಗೆ ಪೂರ್ವಕಾಲದಿಂದ ಹಿಡಿದುಇಲ್ಲಿಯವರೆಗೆ, ಭಿನ್ನ ಕಾರಣಗಳಿಗಾಗಿ ಧ್ವನಿ ಅಡಗಿಸುವ ಕಾರ್ಯ ನಿರಂತರವಾಗಿ ನಡೆದಿದೆ. ಸತಿ ಸಹಗಮನ, ಅಗ್ನಿ ಪರೀಕ್ಷೆಗೆ ಒಡ್ಡುವುದು, ಅಕ್ಷರವಂಚಿತರನ್ನಾಗಿ ಮಾಡಿರುವುದು ಇನ್ನೂ ಅನೇಕ ಕಾರಣಗಳನ್ನು ಮುಂದಿಟ್ಟುಕೊಂಡು ತುಳಿಯುವ ಪ್ರಯತ್ನದ ಹಿಂದೆ ವ್ಯವಸ್ಥಿತ ಮೂಲಭೂತವಾದಿ ಮನಸ್ಸುಗಳಿವೆ. ಇದರ ಜೊತೆಗೆ ಮಹಿಳೆಯೂ ತನ್ನ ಕೈ ಜೋಡಿಸಿದಂತಿದೆ ಅದಕ್ಕೆ ಅವಳು ವ್ಯವಸ್ಥೆಯ ಬಲಿಪಶು. ತಲ್ಲಣಗಳನ್ನು ಮೆಟ್ಟುವ, ಎದುರಿಸುವ ಶಕ್ತಿ ರೂಪಿಸಿಕೊಳ್ಳಬೇಕೆಂದರೆ ಮನೋಬಲವೊಂದೇ ದಾರಿ ಕೀಳರಿಮೆ ಬಿಟ್ಟು ಆ ಮನೋಬಲದ ಮೂಲಕ ಸರಿಸಮಾನವಾದ ಸಮಾಜವನ್ನು ನಿರೂಪಿಸಿ ಯಶಸ್ಸುಗಳಿಸಲು ಸಾಧ್ಯ.

**ಕೊನೆ ಟಿಪ್ಪಣಿ**


1. ಬಸವ ಯುಗದ ವಚನ ಮಹಾ ಸಂಪುಟ–1: ಎಂ.ಎಂ. ಕಲಬುರ್ಗಿ: ಪುಟಸಂಖ್ಯೆ : 886: ವಚನ:919 : ಕನ್ನಡ ಪುಸ್ತಕ ಪ್ರಾಧಿಕಾರ:2001
2. ಬಸವ ಯುಗದ ವಚನ ಮಹಾ ಸಂಪುಟ–1: ಎಂ.ಎಂ. ಕಲಬುರ್ಗಿ: ಪುಟಸಂಖ್ಯೆ:900:ವಚನ : 1101: ಕನ್ನಡ ಪುಸ್ತಕ ಪ್ರಾಧಿಕಾರ:2001
3. ನನ್ನ ಜನಗಳು ಮತ್ತು ಇತರ ಕವಿತೆಗಳು:ಸ್ವಪ್ನ ಬುಕ್ ಹೌಸ್:ಬೆಂಗಳೂರು:ಪುಟಸಂಖ್ಯೆ:45:2008
4. ಕವಿತೆ:ಸಂ.:ಸರಸ್ವತಿ ಚಿಮ್ಮಲಗಿ:ಕರ್ನಾಟಕ ಸಾಹಿತ್ಯ ಅಕಾಡೆಮಿ:ಪುಟಸಂಖ್ಯೆ:28:1995
5. ಕವಿತೆ:ಸಂ.ಲಕ್ಷ್ಮೀಪತಿ ಕೋಲಾರ:ಕರ್ನಾಟಕ ಸಾಹಿತ್ಯ ಅಕಾಡೆಮಿ:ಪುಟಸಂಖ್ಯೆ:64:1999
6. ಪ್ರತಿಭಾ ನಂದಕುಮಾರ್ ಅವರ ಆಯ್ದ ಕವಿತೆಗಳು:ಅಕ್ಷರ ಪ್ರಕಾಶನ, ಸಾಗರ : ಪುಟಸಂಖ್ಯೆ:1979:2007
7. ಹೊಸಗನ್ನಡ ಕಾವ್ಯ–3:ಪ್ರ.ಸಂಪಾದಕರು:ಡಾ ಶ್ರೀಕಂಠ ಕೂಡಿಗೆ: ಪ್ರಸಾರಾಂಗ:ಕುವೆಂಪು ವಿಶ್ವವಿದ್ಯಾನಿಲಯ:ಪುಟಸಂಖ್ಯೆ:44:2008